# ಹರಿದಾಸ ಸಾಹಿತ್ಯದ ಉಗಮ ಮತ್ತು ವಿಕಾಸ

**ಡಾ. ಜ್ಯೋತಿ ಶಂಕರ್. ಸಹಾಯಕ ಪ್ರಾಧ್ಯಾಪಕರು**
ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ

**ಮಾರುತಿ.ಜಿ– ಸಂಶೋಧನಾರ್ಥಿ**
ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯ, ಮೈಸೂರು

**OPEN ACCESS**

Volume: 12

Special Issue: 1

Month: October

Year: 2024

E-ISSN: 2582-0397

P-ISSN: 2321-788X

Impact Factor: 3.025

Citation:
ಶಂಕರಸಜಯ◌ೋತಿ, and ಜಿಮಾರುತಿ. “ಹರಿದಾಸ ಸಾಹಿತಯದ ಉಗಮ ಮತತು ವಿಕಾಸ.” *Shanlax International Journal of Arts, Science and Humanities*, vol. 12, no. S1, 2024, pp. 250–53

DOI:
https://doi.org/10.34293/sijash.v12iS1-Oct.8316

**Abstract**

ಕರ್ನಾಟಕದಲ್ಲಿ ಮಧ್ಯಕಾಲೀನ ಕನ್ನಡ ಸಾಹಿತ್ಯವು ಸಾಂಸ್ಕೃತಿಕ ಇತಿಹಾಸದ ದೃಷ್ಟಿಯಿಂದ ಅತ್ಯಂತ ಮಹತ್ವ ಪೂರ್ಣವಾದ ಕಾಲಘಟ್ಟವಾಗಿದೆ. ನಡುಗನ್ನಡ ಸಾಹಿತ್ಯವು ಪ್ರಮುಖವಾಗಿ ವಚನ ಸಾಹಿತ್ಯ, ಹರಿದಾಸ ಸಾಹಿತ್ಯ ಪರಂಪರೆಯ ತನ್ನದೇ ಆದ ತಾತ್ವಿಕ ನಿಲುವುಗಳೊಂದಿಗೆ ಕನ್ನಡ ಸಾಹಿತ್ಯ ಚರಿತ್ರೆಯ ಪ್ರಮುಖ ಘಟ್ಟವಾಗಿದೆ. ಶಾಸ್ತ್ರ ಸಾಹಿತ್ಯಗಳಿಗೆ ಪ್ರಮುಖ ಆಧಾರ– ‘ಮಾನವನ ಬದುಕು–ಬದುಕುವ ಬಗೆ”1 ಎಂಬುದಾಗಿದೆ. ಪುರಂದರದಾಸರು ಹೇಳುವ “ಮಾನವ ಜನ್ಮ ದೊಡ್ಡದು,ಇದನು ಹಾನಿ ಮಾಡಿಕೊಳ್ಳಬೇಡಿ ಹುಚ್ಚಪ್ಪಗಳಿರಾ”, “ಈಸಬೇಕು ಇದ್ದು ಜಯಿಸಬೇಕು” ‘ಚಿಂತನಾ ಲಹರಿಯು ಮೂಲ ಬೇರುಗಳನ್ನು ‘ಶಾಸ್ತ್ರ ಸಾಹಿತ್ಯ’ದಲ್ಲಿ ಮನಗಾಣಬಹುದು. ಆದ್ದರಿಂದ ಹರಿದಾಸರಲ್ಲಿರುವ ಬಾಳಿನ ಚಿಂತನೆಗಳ ಮೂಲ ನೆಲೆಗಟ್ಟು, ವ್ಯಕ್ತಿತ್ವ ವಿಚಾರಗಳಿಗೆ ಸ್ಫೂರ್ತಿ– ಭಾರತೀಯ ಶಾಸ್ತ್ರದಲ್ಲಿನ ತಳಹದಿಯ ವಿಚಾರವೇ ಆಗಿದೆ. ಹರಿದಾಸ ಸಾಹಿತ್ಯವು ಮುಖ್ಯವಾಗಿ ಭಕ್ತಿ ಪ್ರಧಾನವಾದ, ಸಂಗೀತಲಯವನ್ನು ಪ್ರತಿಬಿಂಬಿಸುವ, ಹರಿಯನ್ನು ಭಾವಪೂರ್ಣವಾಗಿ ಸ್ಮರಣೆಯನ್ನಾಗಿಸಿಕೊಂಡ ಪರಂಪರೆಯಾಗಿದೆ. ಹರಿದಾಸ ಸಾಹಿತ್ಯವು ಕೇವಲ ಭಕ್ತಿ ಪ್ರಧಾನವಾಗಿರದೆ ಮೌಲ್ಯಗಳ ಮಹತ್ವವನ್ನು ಬಿತ್ತುವುದರ ಜೊತೆಗೆ ಸಾಮಾಜಿಕ ಬದುಕಿನಲ್ಲಿರುವ ಅನೇಕ ಮೌಢ್ಯಗಳನ್ನು, ಅಂಧಕಾರಗಳನ್ನು, ಸಮಾಜದ ಓರೆ–ಕೋರೆಗಳನ್ನು ತಿದ್ದುವ ಕಾರ್ಯವನ್ನು ಪ್ರಮುಖವಾಗಿ ಮಾಡಿದೆ. ಇದಕ್ಕಾಗಿ ಹರಿದಾಸರು ಸಮಾಜದ ಆಡುಭಾಷೆಯಲ್ಲಿ ತಮ್ಮ ಅಂತರಂಗದ ಭಕ್ತಿ–ಭಾವಗಳನ್ನು ಅಭಿವ್ಯಕ್ತಿಗೊಳಿಸಿದರು. ಹರಿದಾಸರು ಆಯ್ದುಕೊಂಡದ್ದು ಸಂಗೀತ ಲಯಗಳನ್ನೊಳಗೊಂಡ ಪ್ರಕಾರಗಳಾದ–ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು, ಮುಂಡಿಗೆಗಳು, ವೃತ್ತನಾಮಗಳು, ದಂಡಕಗಳು ಮುಂತಾದ ರಚನೆಗಳು. ಇವೆಲ್ಲವೂ ಒಂದೇ ಕಾಲದಲ್ಲಿ ಪಂಡಿತರನ್ನು, ಪಾಮರರನ್ನು, ಜನ ಸಾಮಾನ್ಯರನ್ನು ಏಕ ಕಾಲದಲ್ಲಿ ಆಕರ್ಷಿಸುತ್ತಾ ಬಂದಿರುವ ವಿಶಿಷ್ಟವಾದ ದಾಸಸಾಹಿತ್ಯದ ವಿಶೇಷವಾದ ರಚನಾ ಪ್ರಕಾರಗಳು. ಹರಿದಾಸ ಸಾಹಿತ್ಯವು ಅಚಲಾನಂದರಿಂದ, ನರಹರಿತೀರ್ಥರಿಂದ ಮೊದಲುಗೊಂಡು ಶ್ರೀಪಾದರಾಜರಿಂದ ಪ್ರಮುಖವಾಗಿ ತಳಹದಿಯನ್ನು ಪಡೆದು ಅನೇಕ ದಾಸಶ್ರೇಷ್ಠರಿಂದ ಜನಪ್ರಿಯವಾಯಿತು. ಅಡಿಟಿಪ್ಪಣಿ–1.ದಾಸಸಾಹಿತ್ಯದ ಉಗಮ ಮತ್ತು ವಿಕಾಸದ ವಿಚಾರದಲ್ಲಿ ದಾಸಸಾಹಿತ್ಯ ಕೈಪಿಡಿ.ಸಂ.ಡಾ.ಸ್ವಾಮಿರಾವ್ ಕುಲಕರ್ಣಿ,ಡಾ.ಶಿವಾನಂದ.–ಪ್ರಸಾರಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ–2022.ಪು–58

**Keywords:** **ಭಕ್ತಿ–ಭಾವ, ಅಧ್ಯಾತ್ಮಿಕತೆ, ಮುಕ್ತಿ ಮಾರ್ಗ, ಓರೆಕೋರೆಗಳು, ಪ್ರಾರ್ಥನೆ, ದಾಸಕೂಟ–ವ್ಯಾಸಕೂಟ, ಕೀರ್ತನೆಗಳು**

## ಪ್ರವೇಶ

ಹನ್ನೆರಡು–ಹದಿಮೂರನೇ ಶತಮಾನದಲ್ಲಿ ನರಹರಿತೀರ್ಥರು, ಶ್ರೀಅಚಲಾನಂದರು, ಹದಿನೈದು–ಹದಿನಾರನೇ ಶತಮಾನದಲ್ಲಿ ಶ್ರೀಪಾದರಾಜರು, ಪುರಂದರದಾಸರು, ಕನಕದಾಸರು, ಪ್ರಸನ್ನವೆಂಕಟದಾಸರು, ಜಗನ್ನಾಥದಾಸರು, ಗೋಪಾಲದಾಸರು, ವಿಜಯದಾಸರು ಮಹಿಮದಾಸರು, ಹೆಳವನಕಟ್ಟೆ ಗಿರಿಯಮ್ಮ ಇನ್ನೂ ಮುಂತಾದ ದಾಸರು ಅದೇ ಪ್ರಕಾರವನ್ನೇ ಅಧ್ಯಾತ್ಮದ ಅಭಿವ್ಯಕ್ತಿಗೆ ಅನುವಾಗುವಂತೆ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು, ಮುಂಡಿಗೆಗಳು, ವೃತ್ತನಾಮಗಳು, ದಂಡಕಗಳು ಎಂಬ ಸಾಹಿತ್ಯ ಪ್ರಕಾರವನ್ನು ಅಸ್ತಿತ್ವಕ್ಕೆ ತಂದರು. ಹರಿದಾಸ ಸಾಹಿತ್ಯ ಪರಂಪರೆಯ ವಸ್ತು ಅಧ್ಯಾತ್ಮಿಕ ಅಥವಾ ಪಾರಮಾರ್ಥಿಕ ಎನ್ನಬಹುದು. ಆದರೆ ವಚನಕಾರರಿಗಿಂತ ಹರಿದಾಸರು ಒಂದು ಹೆಜ್ಜೆ ಮುಂದೆ ಹೋಗಿ ಏಕಕಾಲದಲ್ಲಿ ಪ್ರಾಪಂಚಿಕ ಅರ್ಥ ಹಾಗೂ ಪಾರಮಾರ್ಥಿಕ ಅರ್ಥ ಎರಡೂ ಅನ್ವಯವಾಗುವಂತೆ ಪ್ರಯೋಗ ನಡೆಸಿರುವುದು ರಚನೆಗಳಿಂದ ತಿಳಿದು ಬರುತ್ತದೆ.

ಕನ್ನಡ ನಾಡಿನ ಹಳ್ಳಿಗಳಲ್ಲಿ ದಿನ ಬೆಳಗಾದರೆ ‘ದೇವರ ನಾಮ’ಗಳನ್ನು ಹಾಡಿಕೊಳ್ಳುತ್ತಾ ಬೀದಿ–ಬೀದಿಗಳಲ್ಲಿ ಸುಳಿದಾಡುವ ವಿಶಿಷ್ಟ ಉಡುಪು–ಅಲಂಕಾರಗಳ ದಾಸಯ್ಯಗಳು ಹೆಚ್ಚಾಗಿ ಕಾಣಿಸಿಕೊಳ್ಳುತ್ತಾರೆ. ಬೀದಿಗಳಲ್ಲಿ ಓಡಾಡುವಾಗ ಅಯಾಚಿತವಾಗಿ ಅವರ ಹಾಡಿನ ಒಂದೆರಡು ಚರಣಗಳು ನಮ್ಮ ಕಿವಿಗೆ ಬೀಳುತ್ತವೆ. ಹೂವ ತರುವರ ಮನೆಗೆ........ ಜಾಲಿಯ ಮರದಂತೆ , ಯಾರೋ ಬಂದವರು.2ಹೀಗೆ ಯಾವುದೋ ದೇವರ ನಾಮದ ಪಲ್ಲವಿ, ಕೊನೆಯಲ್ಲಿ ಪುರಂದರವಿಠಲ ಎಂಬ, ಕಾಗಿನೆಲೆ ಆದಿಕೇಶವ ಎಂಬ ಅಂಕಿತದೊಂದಿಗೆ ಮುಕ್ತಾಯಗೊಳ್ಳುತ್ತದೆ.

ಮನೆಯಲ್ಲಿ ಗೃಹಿಣಿಯರು ವ್ರತ, ನಿಯಮ, ಆರತಿ ಅಕ್ಷತೆ, ವಿವಾಹ ಮೊದಲಾದ ಶುಭ ಸಂದರ್ಭಗಳಲ್ಲಿ, ಕೆಲವು ಬಾರಿ ಮಕ್ಕಳನ್ನು ಆಡಿಸಲೋ, ಮಲಗಿಸಲೋ, ಕೆಲವು ಬಾರಿ ಯಾವುದೋ ವಿಚಿತ್ರ ತಪ್ತ ಮನಃಸ್ಥಿತಿಯಲ್ಲೋ ತಮ್ಮಷ್ಟಕ್ಕೆ ಇದೇ ಬಗೆಯ ಹಾಡುಗಳನ್ನು ಹಾಡಿಕೊಳ್ಳುತ್ತಾರೆ. ಭಾಗ್ಯದ ಲಕ್ಷ್ಮಿಬಾರಮ್ಮ, ಅಮ್ಮ ಗುಮ್ಮನ ಕರೆಯದಿರೆ, ಯಾರಿಗೆ ಯಾರುಂಟು, ಜಾಲಿಯ ಮರದಂತೆ, ತಾಳುವಿಕೆಗಿಂತ ತಪವು ಇಲ್ಲ– ಈ ಮೊದಲಾದ ಹಾಡುಗಳನ್ನು ಬರೆದ ಕೆಲವಾರು ಹರಿದಾಸರು ಇದ್ದಾರೆ.

ಅಧ್ಯಯನದ ವ್ಯಾಪ್ತಿ:–ಕನ್ನಡ ಸಮಾಜದಲ್ಲಿ ಕೀರ್ತನ ಸಾಹಿತ್ಯ ಬೇರ್ಪಡಿಸಲಾಗದೆ ಬೆರೆತು ಹೋಗಿರುವ ಒಂದು ವಿಶಿಷ್ಟ ಸಾಹಿತ್ಯ ಪ್ರಕಾರ. 'ದೇವರ ನಾಮ' ಎಂದೇ ಪ್ರಸಿದ್ಧವಾಗಿ ಕನ್ನಡ ನಾಲಗೆಯ ಮೇಲೆ ನಲಿದಾಡಿದ

ಅಡಿ ಟಿಪ್ಪಣಿ–2.ಕೀರ್ತನ ಸಾಹಿತ್ಯದ ಉಗಮ ಮತ್ತು ವಿಕಾಸ ವಿಚಾರವಾಗಿ ಕೀರ್ತನಕಾರರು,ಲೇ.ಎಚ್.ಎಸ್.ವೆಂಕಟೇಶ ಮೂರ್ತಿ,1975,ಪು.1,2

ಸಾಹಿತ್ಯ ಪ್ರಕಾರ. ಭಗವಂತನನ್ನು ಕುರಿತ ಭಕ್ತನ ತನ್ಮಯತೆ. ಅತ್ಯಂತ ತೀವ್ರವಾದ ಭಾವ ಹಾಡಾಗಿ ಹೊಮ್ಮುತ್ತದೆ ಎಂಬ ಪ್ರಸಿದ್ಧ 'ಉಕ್ತಿ'ಗೆ ಕೀರ್ತನೆ ಸಾಕ್ಷಿ. ಕನ್ನಡದಲ್ಲಿ ಭಗವಂತ ಮತ್ತು ಭಕ್ತನ ನಡುವಿನ ಗಾಢ ಸಂಬಂಧದ ಕೀರ್ತನೆಯಾಗಿ ತನ್ನನ್ನು ತಾನು ಆಕಾರಗೊಳಿಸಿಕೊಂಡಿದೆ.

ಕನ್ನಡದಲ್ಲಿ ಕೀರ್ತನೆ ಎಂಬುದೇನೂ ಹೊಸದಲ್ಲ. ಕನ್ನಡದ ಮಟ್ಟಿಗೆ ಅದು ಪಾಡು, ಮೆಲ್ವಾಡು, ಬಾಜನೆಗಬ್ಬಗಳಿದ್ದವು. ಆಮೇಲೆ ಶರಣರಲ್ಲಿ ಕೆಲವರು ಪದಗಳನ್ನು ಹಾಡಿದರು. ಅದೇ ಹರಿದಾಸರ ಬಾಯಲ್ಲಿ 'ಕೀರ್ತನೆ' ಅಂದರೆ 'ಹರಿಸ್ತುತಿ' ಪರವಾದ ಹಾಡಾಯಿತು. ಸಂಗೀತದಲ್ಲಿ ಪ್ರಮಾಣದ ಸ್ವರೂಪ ಪಡೆಯಿತು.

- **ಭಕ್ತಿ–ಭಾವದ ನೆಲೆಗಳು:** ನಾಡಿನ ಜನಸಾಮಾನ್ಯರಿಗೆ ಐಹಿಕವಾಗಲಿ, ಆಧ್ಯಾತ್ಮಿಕವಾಗಲಿ ಮುಟ್ಟಬೇಕಾದುದು ಜನರ ಆಡುದನಿಯಲ್ಲಿ. ಜನತೆಗೆ ಅವರವರ ವೃತ್ತಿಭಾವದಲ್ಲಿ, ವೃತ್ತಿಭಾವ ಪರಿಭಾಷೆಯಲ್ಲಿ ಅಭಿವ್ಯಕ್ತ ಪಡಿಸಬೇಕಾದುದ್ದು ಅನಿವಾರ್ಯತೆಯನ್ನುಂಟು ಮಾಡಬೇಕಿತ್ತು. ಈ ದೃಷ್ಟಿಯಿಂದಾಗಿ "ನಾರಾಯಣ ಎಂಬ ನಾಮದ ಬೀಜವ ನಾಲಗೆಯ ಕೂರಿಗೆಯ ಮಾಡಿ ಬಿತ್ತಿರಯ್ಯ" ಎಂಬ ಕನಕದಾಸರ ಕೀರ್ತನೆಯು ಇದಕ್ಕೆ ಸಾಕ್ಷಿಯಾಗಿದೆ. ಹರಿದಾಸರಲ್ಲಿ ದೈವಭಕ್ತಿಯನ್ನು ಹೊಂದುತ್ತಾ ಭಕ್ತಿ–ವೈರಾಗ್ಯದೊಂದಿಗೆ ಸಂಗೀತಲಯವನ್ನು ಬಿತ್ತುತ್ತಾ ಮುಕ್ತಿಯನ್ನು ಸಾಧಿಸುವ ಪರಿಯು ಹರಿದಾಸ ಪರಂಪರೆಯ ಮುಖ್ಯವಾಹಿನಿಯಾಗಿದೆ. ಢಾಂಬಿಕತೆಯ ಭಕ್ತರ ಆಚಾರ–ವಿಚಾರಗಳು ನಿಷ್ಪ್ರಯೋಜಕತೆಯನ್ನು ದಾಸಸಾಹಿತ್ಯದ ಅನೇಕ ಕೀರ್ತನೆಯ ಪ್ರಕಾರದಲ್ಲಿ ವ್ಯಕ್ತವಾಗಿದೆ.
- **ಅಧ್ಯಾತ್ಮಿಕತೆ:** ಹರಿದಾಸರು ತಮ್ಮನ್ನು ತಾವು ಅರಿಯಲು ಕಂಡುಕೊಂಡಂತಹ ಸನ್ಮಾರ್ಗ ಎಂದರೆ ಆಧ್ಯಾತ್ಮಿಕ ಮಾರ್ಗ. ಹರಿ ಸರ್ವೋತ್ತಮನು. ಈ ಜಗತ್ತು ಪಾರಮಾರ್ಥಿಕ ಸತ್ಯ ಹಾಗೂ ನಿತ್ಯದ ಜೀವಗಣಗಳನ್ನು ಹೊಂದಿದ್ದು ಹರಿಯ ಅನುಯಾಯಿಗಳು ನಿತ್ಯತಾರತಮ್ಯವಿಲ್ಲದೇ ಇದನ್ನು ಪರಿಪಾಲಿಸಿಕೊಂಡು ಬಂದರು. ಲೋಕನಾಯಕನು ನಮ್ಮೊಳಗಿರುವಾಗ ಅವನ ಮಹಿಮೆಯನ್ನು ಈ ಲೋಕದ ಅಂತಿಮ ಗುರಿಯನ್ನು ನಾವು ಸಾಧಿಸಿಕೊಳ್ಳಬೇಕಾಗಿದೆ. ಇದನ್ನು ಸಾಧಿಸಲು ನಮ್ಮ ಆಧ್ಯಾತ್ಮಿಕ ಮಾರ್ಗವು ಶ್ರೇಷ್ಠವಾದುದು. ಇದಕ್ಕಾಗಿಯೇ ಹರಿದಾಸರು ಸಂಗೀತಲಯದಲ್ಲಿ ದಾಸಸಾಹಿತ್ಯವನ್ನು ಆಯ್ಕೆ ಮಾಡಿಕೊಂಡರು. ನಮ್ಮ ಒಳಿತು–ಕೆಡುಕುಗಳನ್ನು ಹರಿ ಸರ್ವೋತ್ತಮನು ನಿರ್ಣಯಿಸುತ್ತಾ, ಎಲ್ಲಾ ಮತ ತತ್ವಗಳನ್ನು, ಇತರ ಶಾಸ್ತ್ರಗಳನ್ನು ಮೊದಲು ಅಧ್ಯಯನ ಮಾಡಿ ಅದನ್ನು ಕರಗತಮಾಡಿಕೊಳ್ಳಬೇಕಾಗಿದೆ. ಇದಕ್ಕಾಗಿ ನಮ್ಮ ಮನಸ್ಸು ಮತ್ತು ದೇಹವನ್ನು ಸಜ್ಜುಗೊಳಿಸಿ ಒಂದಾಗಿಸಿಕೊಳ್ಳಬೇಕು. ಇದೇ ಆಧ್ಯಾತ್ಮಿಕ ಮಾರ್ಗವಾಗಿದೆ. ಇದಕ್ಕಾಗಿ ಹರಿದಾಸರು ತಮ್ಮ ತಮ್ಮ ಹಾಡುಗಳ ಮೂಲಕ ಅಂತರಂಗದ ಶೋಧನೆಯನ್ನು, ಲೋಕಾನುಭವವನ್ನು ಪಡೆದುಕೊಂಡಿದ್ದಾರೆ.
- **ಓರೆಕೋರೆಗಳು:** ಹರಿದಾಸರು ಲೋಕನೀತಿಯನ್ನು ಪ್ರಚುರಪಡಿಸಲು ಕಾರಣ ಸಮಾಜದಲ್ಲಿ ತಾವು ನೋಡಿದ ಓರೆಕೋರೆಗಳು, ಮೂಢನಂಬಿಕೆಗಳು, ಅಂಧಕಾರಗಳು, ಅನಾಚಾರಗಳು ಇನ್ನೂ ಮುಂತಾದವುಗಳು. ಈ ಅಂಶಗಳು ಸಮಾಜದಲ್ಲಿ ಸಾಕಷ್ಟು ವ್ಯತಿರಿಕ್ತ ಪರಿಣಾಮಗಳನ್ನುಂಟು ಮಾಡಿದವು. ಸಮಾಜದಲ್ಲಿ ಸಮಾನತೆಯನ್ನು ಸಾರಲು, ತಮ್ಮ ತಮ್ಮ ಗೀತ ರಚನೆಗಳ ಮುಖೇನ ಹರಿದಾಸರು ಮುಂದಾದರು. ಪುರಂದರದಾಸರು "ಡೊಂಕು ಬಾಲದ ನಾಯಕರೇ ನೀವೇನೂಟವ ಮಾಡಿದಿರಿ"? , "ನಗೆಯು ಬರುತಿದೆ ಎನಗೆ ನಗೆಯು ಬರುತಿದೆ", ಕನಕದಾಸರು "ಇನ್ನೆಷ್ಟು ಕಾಲ ಮೈಮರೆದು ಮಲಗಿದರೆ ನಿನ್ನನೆಬ್ಬಿಸುವರನಾರನು ಕಾಣೆನು", ವಾದಿರಾಜರು "ನೇಮದಿಂದ ಸ್ನಾನವ ಮಾಡಿರೋ" ಮುಂತಾದ ಕೀರ್ತನೆಗಳ ಮೂಲಕ ಸಮಾಜದಲ್ಲಿನ ಮೂಢನಂಬಿಕೆಗಳ್ನು ಹೋಗಲಾಡಿಸಲು ಮುಂದಾಗಿದ್ದಾರೆ.

**ಹರಿದಾಸ ಸಾಹಿತ್ಯದ ಉಗಮ**

ಕೀರ್ತನ ಪರಂಪರೆಗೆ ಒಂದು ಮಹಾಪೂರವನ್ನು ತಂದು ಅಸಂಖ್ಯಾತ ಹಾಡುಗಬ್ಬಗಳನ್ನು ರಚಿಸಿ ಕೀರ್ತನಕಾರರೆಂದೇ ಪ್ರಸಿದ್ಧರಾದವರು ಹರಿದಾಸರು. 9ನೇ ಶತಮಾನದಲ್ಲಿ ಅಚಲಾನಂದರಿಂದ ಹರಿದಾಸಕ್ಕೆ ಒಂದು ತಳಹದಿ ದೊರೆಯಿತು ಎಂದು ಬೇಲೂರು ಕೇಶವದಾಸರು 'ಹರಿದಾಸ ಸಾಹಿತ್ಯ' ಗ್ರಂಥದಲ್ಲಿ ಉಲ್ಲೇಖಿಸಿದ್ದಾರೆ. ಸುಮಾರು 13–14ನೇ ಶತಮಾನದಲ್ಲಿ ಜೀವಿಸಿದ್ದ ನರಹರಿತೀರ್ಥರು ಹರಿದಾಸ ಕೀರ್ತನಾ ಪರಂಪರೆಯ ಆದ್ಯ ಕೃತಿಕಾರರೆಂಬುದರ ಬಗ್ಗೆ ವಿದ್ವಾಂಸರಲ್ಲಿ ಯಾವುದೇ ಭೇದ ಉಳಿದಿಲ್ಲ.3 ನರಹರಿತೀರ್ಥರು ಮೂರು ಹಾಡುಗಳನ್ನು ರಚಿಸಿದ್ದಾರೆ. ಇವರ ಉಪಲಬ್ಧ ಕೀರ್ತನೆಗಳು "ಎಂತು ಮರುಳಾದೆ ನಾ ಎಂತು ಮರುಳಾದೆ", "ಹರಿಯೇ ಇದು ಸರಿಯೇ", "ತಿಳಕೋ ನಿನ್ನೊಳಗೆ ನಿನ್ನ ತಿಳಕೋ". ಇವರ ನಂತರ ಹದಿನೈದನೆಯ ಶತಮಾನದವರೆಗೆ ಗಣನೀಯರಾದಂತಹ ಬೇರೆ ಹರಿದಾಸರು ಕಾಣಿಸುವುದಿಲ್ಲ. ವ್ಯಾಸರಾಯರ ನೇತೃತ್ವದಲ್ಲಿ ದಾಸಸಾಹಿತ್ಯ ಒಂದು ಪ್ರವಾಹದಂತೆ ತುಂಬಿ ಹರಿಯಿತು. ಪುರಂದರದಾಸ, ಕನಕದಾಸ, ಮೊದಲಾದವರು ಅಸಂಖ್ಯಾತ ಕೀರ್ತನೆಗಳನ್ನು ರಚಿಸಿ ಹರಿದಾಸ ಸಾಹಿತ್ಯ ಮತ್ತು ಸಾಮಾಜಿಕ ಚಟುವಟಿಕೆಗಳಿಗೆ ಒಂದು ಆಂದೋಲನದ ಸ್ವರೂಪವನ್ನು ಕಲ್ಪಿಸಿದರು. ಶ್ರೀಕೃಷ್ಣದೇವರಾಯನ ಆಳ್ವಿಕೆಯ

ವಿಜಯನಗರ ಸಾಮ್ರಾಜ್ಯದ ಈ ಉಚ್ಛ್ರಾಯ ಕಾಲದಲ್ಲಿ ವಿಜಯನಗರವನ್ನು ಅಡಿ ಟಿಪ್ಪಣಿ–3.ಹರಿದಾಸ ಸಾಹಿತ್ಯದ ಸ್ವರೂಪ ಬಗ್ಗೆ–ಶ್ರೀಹರಿದಾಸ ಸಾಹಿತ್ಯ ಒಂದು ಅಧ್ಯಯನ–ಬೇಲೂರು ಕೇಶವದಾಸರು,1944, ಪು–35,37

ಕೇಂದ್ರವಾಗಿರಿಸಿಕೊಂಡ ಕಾಲದ ಹರಿದಾಸರು ಹಿಂದೆ ಪ್ರಸ್ತಾಪಿಸಲಾದ ಸಮಕಾಲೀನ ಶಿವಶರಣರೊಟ್ಟಿಗೆ ಹಾಡುಗಬ್ಬಗಳನ್ನು ರಚಿಸಿ ಕೀರ್ತನ ಸಾಹಿತ್ಯದ ಮಹಾಪೂರಕ್ಕೆ ಪ್ರಧಾನ ಕಾರಣರಾದರು.

**ಹರಿದಾಸ ಸಾಹಿತ್ಯದ ವಿಕಾಸ:**

ಹದಿನೇಳನೇ ಶತಮಾನದ ಕೊನೆಯಲ್ಲಿ ದಾಸ ಸಾಹಿತ್ಯದ ದ್ವಿತೀಯ ಘಟ್ಟ ಪ್ರಾರಂಭವಾಯಿತು. ಹದಿನಾರನೇ ಶತಮಾನದಲ್ಲಿ ವ್ಯಾಸರಾಯರು ದಾಸಕೂಟದ ಸ್ಫೂರ್ತಿ ಕೇಂದ್ರವಾಗಿದ್ದು ವಿಜಯನಗರದಲ್ಲಿ ಹರಿದಾಸ ಪರಂಪರೆಗೆ ಚಾಲನೆ ನೀಡಿದಂತೆ "17ನೆಯ ಶತಮಾನದಲ್ಲಿ ಮಂತ್ರಾಲಯದ ಯತಿವರ್ಯರಾದ ರಾಘವೇಂದ್ರತೀರ್ಥರು ದಾಸಕೂಟದ ಸ್ಫೂರ್ತಿ ಕೇಂದ್ರವಾಗಿ ಪರಿಣಮಿಸಿದರು"4.ರಾಘವೇಂದ್ರರ ಶಿಷ್ಯರಾದ ವಿಜಯದಾಸರು, ಹಿಂದೆ ವ್ಯಾಸರಾಯರ ಶಿಷ್ಯರಾಗಿ ಪುರಂದರದಾಸರು ವಹಿಸಿದ್ದ ಕರ್ಣಭಾರತ್ವದ ಪಾತ್ರವನ್ನು ಈಗ ವಹಿಸಿಕೊಂಡರು. ಅವರ ನೇತೃತ್ವದಲ್ಲಿ ಜಗನ್ನಾಥದಾಸರು, ಗೋಪಾಲದಾಸರು, ಮೋಹನದಾಸ ಮೊದಲಾದವರು ಅಸಂಖ್ಯಾತ ಕೀರ್ತನೆಗಳನ್ನು ರಚಿಸಿ ಕೀರ್ತನ ಸಾಹಿತ್ಯ ಮತ್ತೊಮ್ಮೆ ಊರ್ಜಿತವಾಗಿ ವಿಜೃಂಭಿಸಲು ಕಾರಣರಾದರು. 17ನೇ ಶತಮಾನದಲ್ಲಿ ಮೈಸೂರಿನ ಚಿಕ್ಕದೇವರಾಜ ಒಡೆಯರ ಕಾಲದಲ್ಲಿ ತಿರುಮಲಾರ್ಯ ಮೊದಲಾದ ಶ್ರೀವೈಷ್ಣವರು ಅನೇಕ ಕೀರ್ತನೆಗಳನ್ನು ರಚಿಸಿ ಕೀರ್ತನ ಪರಂಪರೆಗೆ ಮತ್ತೊಂದು ಉಪನದಿ ಸೇರಲು ಕಾರಣರಾದರು. ಕನಕದಾಸರು ಹೇಳುವಂತಹ ಸನ್ಮಾರ್ಗದ ನುಡುಗಳು– ದೊರೆತನವು ಬಂದಾಗ ಕೆಟ್ಟ ನುಡಿಯಲು ಬ್ಯಾಡ । ಸಿರಿ ಬಂದ ಕಾಲಕ್ಕೆ ದಾನವ ಮರೆಯಬೇಡ, ಪರೋಪಕಾರ, ಗರ್ವರಹಿತ ಜೀವನ, ಸಮರಸ ಬಾಳಿನ ಬುನಾದಿ । ಎಂಬುದು ಹರಿದಾಸರ ನಿಲುವು.

800 ವರ್ಷಗಳ ತನ್ನ ಸುದೀರ್ಘ ಇತಿಹಾಸದಲ್ಲಿ ಕೀರ್ತನ ಸಾಹಿತ್ಯ ತನ್ನ ಆತಂರಿಕ ಮತ್ತು ಬಾಹ್ಯ ರೂಪದಲ್ಲಿ ಕಾಲಕಾಲಕ್ಕೆ ಖಚಿತವಾಗಿ ಗುರುತಿಸಬಹುದಾದ ವ್ಯತ್ಯಾಸಗಳನ್ನು ಪಡೆಯುತ್ತಾ ಬಂದಿದೆ. ಹರಿದಾಸರು ಕೀರ್ತನೆ, ಸುಳಾದಿ, ಉಗಾಭೋಗಗಳನ್ನು, ಮುಂಡಿಗೆಗಳನ್ನು ತಮ್ಮ ಅಭಿವ್ಯಕ್ತಿ ಮಾಧ್ಯಮವಾಗಿ ರೂಢಿಸಿದರು. ಮೊದಲು ಪಲ್ಲವಿ, ಪಲ್ಲವಿಯೊಡನೆ ಅನುಪಲ್ಲವಿ ಇದ್ದು ಬಳಿಕ ನಾಲ್ಕು ಚರಣಗಳ ಪದ್ಯಗಳು. ಕೊನೆಯಲ್ಲಿ ಕವಿಯ ಆದಿದೈವಗಳನ್ನು ಸೂಚಿಸುವ ಅಂಕಿತ. ಈ ಹಾಡುಗಳು ಉತ್ಸಾಹ, ಮಂದಾನಿಲ, ಲಲಿತ ಲಯದಲ್ಲಿಯಾಗಲೀ, ಅಥವಾ ಅವುಗಳಿಗೆ ಸಮಾನವಾದ ಅಂಶಗಣಕ್ಕೆ ಸೇರಿದ ಮಟ್ಟುಗಳಲ್ಲಿ ರಚಿತವಾಗುತ್ತವೆ. ಅವುಗಳಲ್ಲಿ ವಿಷ್ಣುಗಣಗಳು ಹೆಚ್ಚು. ಸಾಂಗತ್ಯ, ರಗಳೆ, ಷಟ್ಪದಿಯ ಲಯಗಳಲ್ಲಿಯೂ ಸಹ ಕೀರ್ತನೆಗಳು ರಚಿತವಾಗಿವೆ. ಅಂಶಗಣ ಪ್ರಧಾನವಾಗಿ ಕಂಡುಬರುವುದು. ಹರಿದಾಸರ ಹಾಡುಗಳು ತುಂಬಾ ಸರಳ. ಅವುಗಳ ಭಾಷೆ ಆಡುನುಡಿಯ ಸ್ವರೂಪ ಮತ್ತು ಧಾಟಿಗಳಿಗೆ ಹೆಚ್ಚು ಹತ್ತಿರ. ಅಡಿಟಿಪ್ಪಣಿ–4.ಹರಿದಾಸ ಸಾಹಿತ್ಯದ ಪುನರಿಜ್ಜೀವನ ಯುಗದಲ್ಲಿ ಹರಿದಾಸ ಸಾಹಿತ್ಯ ಸಾರ,ಲೇ.ಡಾ.ಜಿ.ವರದರಾಜರಾವ್, 1987, ಪು.32,33,34

ಪ್ರತಿಮೆಗಳ ಬಳಕೆ ಹೆಚ್ಚಾಗಿರುವ ಈ ಕೃತಿಗಳು ಸಾಹಿತ್ಯಿಕವಾಗಿ ಹೆಚ್ಚು ಪರಿಪೂರ್ಣ ಕೃತಿಗಳು. ವೈಯಕ್ತಿಕ ನೋವುಗಳೊಂದಿಗೆ ಸಾಮಾಜಿಕ ಎಚ್ಚರದ ವಸ್ತುಗಳನ್ನು ಹರಿದಾಸರು ಕೀರ್ತನೆಯಲ್ಲಿ

ನಿರ್ವಹಿಸಿದ್ದು ವಿಶೇಷವಾಗಿ ಗಮನಿಸಬೇಕಾದ ಅಂಶ. ದಾಸಸಾಹಿತ್ಯ ದ್ವಿತೀಯ ಘಟ್ಟದಲ್ಲಿ ರಚಿತವಾದ ಕೃತಿಗಳು ಮಾತ್ರ ಮತಸಿದ್ಧಾಂತ ಮತ್ತು ಸಂಪ್ರದಾಯ ನಿಷ್ಠೆಯಿಂದ ಹೆಚ್ಚು ಮುದುಡಿಕೊಂಡವು.

17ನೇ ಶತಮಾನದ ಶ್ರೀವೈಷ್ಣವ ಹಾಡುಗಾರರು ಕೀರ್ತನೆಗಳ ವಸ್ತು ವ್ಯಾಪ್ತಿಯನ್ನು ಮತ್ತಷ್ಟು ವಿಸ್ತರಿಸಿದರು. ಹರಿದಾಸರಿರಲಿ, ಶ್ರೀವೈಷ್ಣವ ಕವಿಗಳಿರಲಿ ಸಾಹಿತ್ಯ ಮತ್ತು ಸಂಗೀತದ ಸಾಮರಸ್ಯ ಕೀರ್ತನ ಸಾಹಿತ್ಯದ ಪ್ರಮುಖ ವೈಶಿಷ್ಟ್ಯವೆನ್ನಬಹುದು. ಇಪ್ಪತನೆಯ ಶತಮಾನದಲ್ಲಿ ನವೋದಯ ಕವಿಗಳು ಬರೆದ ಕೀರ್ತನೆಗಳಿಗೂ ಭಕ್ತಿ ಪ್ರಧಾನ ಭಾವವಾಗಿರುವುದನ್ನು ಗಮನಿಸಿದರೆ ಸಂಗೀತ ಮತ್ತು ಭಕ್ತಿ ಕೀರ್ತನ ಸಾಹಿತ್ಯದ ಅವಿಭಾಜ್ಯ ಅಂಶಗಳೆನಿಸುವುದು.

**ಉಪಸಂಹಾರ**

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ನಡುಗನ್ನಡ ಸಾಹಿತ್ಯ ಘಟ್ಟವು ಅಧ್ಯಯನ ದೃಷ್ಟಿಯಿಂದ ಪ್ರಮುಖವಾದ ಚರಿತ್ರೆಯಾಗಿದೆ. ವಚನ ಸಾಹಿತ್ಯದಂತೆ ಹರಿದಾಸ ಸಾಹಿತ್ಯ ಕ್ಷೇತ್ರವು ವಿಶೇಷವಾಗಿ ಹರಿನಾಮ ಸ್ಮರಣೆಯಲ್ಲಿ ಕೀರ್ತನೆಗಳು, ಸುಳಾದಿಗಳು, ಉಗಾಭೋಗಗಳು, ಮುಂಡಿಗೆಗಳು, ವೃತ್ತನಾಮಗಳು ಮುಂತಾದವುಗಳ ರಚನೆಗಳು ಅಧ್ಯಯನಕ್ಕೆ ಮಹತ್ತರವಾದ ಪಾತ್ರವನ್ನು ವಹಿಸಿವೆ.ಈ ಕುರಿತ ಹರಿದಾಸ ಸಾಹಿತ್ಯದ ಉಗಮ ಮತ್ತು ವಿಕಾಸದ ಅಧ್ಯಯನವನ್ನು ಸಂಶೋಧನಾ ಕಾರ್ಯವನ್ನು ಕೈಗೆತ್ತಿಕೊಂಡು ಅದನ್ನು ಸಮಗ್ರವಾಗಿ ಅಧ್ಯಯನ ಮಾಡುವುದು ಪ್ರಮುಖ ಉದ್ದೇಶವಾಗಿದೆ. ಹರಿದಾಸರು ಹರಿಭಕ್ತಿಯ ಮಹಿಮೆಯನ್ನು, ನೈತಿಕವಾದಂತಹ ಎಚ್ಚರವನ್ನು ಸಮಾಜಕ್ಕೆ ಪ್ರಚುರಪಡಿಸುವ ಉದ್ದೇಶಕ್ಕಾಗಿಯೇ ಸಾಹಿತ್ಯವನ್ನು ರಚಿಸಿಕೊಂಡರು. ಹರಿದಾಸರು ತಾವುಗಳು ರಚಿಸಿರುವ ಸಾಹಿತ್ಯವನ್ನು ಹಾಡಿ–ಕುಣಿಯುತ್ತಾ ಪ್ರತಿ ಮನೆಮನೆಗೂ ತಲುಪಿಸುವ ಮಹತ್ತರವಾದ ಕಾರ್ಯವನ್ನು ಕೈಗೆತ್ತಿಕೊಂಡರು. ಆದುದರಿಂದ ಹರಿದಾಸ ಸಾಹಿತ್ಯ ಸೃಷ್ಟಿ ಮತ್ತು ಅವುಗಳ ಪ್ರಸಾರ ಏಕಕಾಲಕ್ಕೆ ಆಗಿದ್ದುದು ನಾವು ಗಮನಿಸುವಂತಿದೆ.

**ಟಿಪ್ಪಣಿ**

ಹರಿದಾಸ ಸಾಹಿತ್ಯ ಉಗಮ ಮತ್ತು ವಿಕಾಸದಲ್ಲಿ ಅನೇಕ ಪ್ರಕಾರಗಳ ರಚನೆಗಳನ್ನು ವಿದ್ವಾಂಸರಾದ ಆರ್.ಎಸ್.ಪಂಚಮುಖಿ ಅವರು ನಾಲ್ಕು ಮೆಟ್ಟಿಲುಗಳಾಗಿ ವಿಂಗಡಿಸಬಹುದು ಎಂದು ಅಭಿಪ್ರಾಯಪಡುತ್ತಾರೆ. ಕೀರ್ತನೆ, ಸುಳಾದಿ, ಉಗಾಭೋಗ, ಮುಂಡಿಗೆ, ದಂಡಕಗಳು, ವೃತ್ತನಾಮಗಳನ್ನು ರಚಿಸಿದರು. ಹರಿದಾಸ ಸಾಹಿತ್ಯವು ಕನ್ನಡ ಸಾಹಿತ್ಯ ಲೋಕಕ್ಕೆ ಪ್ರಧಾನವಾದ ಕೊಡುಗೆಯನ್ನು

ನೀಡಿದೆ. ಹರಿದಾಸರು ಅಧ್ಯಾತ್ಮಿಕವಾಗಿ ಸಮಾಜವನ್ನು ತಿದ್ದುವ ಕಾರ್ಯವನ್ನು ನಿರ್ವಹಿಸಿದರು. ಹರಿದಾಸ ಸಾಹಿತ್ಯ ಉಗಮಕ್ಕೆ ಅಚಲಾನಂದರು, ನರಹರಿತೀರ್ಥರು ಹಾಗೂ ಆದ್ಯರೆನ್ನುವವರು ಕಾರಣೀಕರ್ತರೆಂದು ವಿದ್ವಾಂಸರು ವಿಸ್ತೃತವಾಗಿ ಚರ್ಚೆ ಮಾಡಿರುತ್ತಾರೆ.

**ಪರಾಮರ್ಶನ ಗ್ರಂಥಗಳು**

1. ಲೇ. ಬೇಲೂರು ಕೇಶವದಾಸರು–ಶ್ರೀಹರಿದಾಸ ಸಾಹಿತ್ಯ ಒಂದು ಅಧ್ಯಯನ–ಪ್ರಕಾಶಕರು ಗೀತಾ ಬುಕ್ ಹೌಸ್ ಮೈಸೂರು–ಪು.35,37 –1944
2. ಲೇ.ಜಿ.ವರದರಾಜರಾವ್–ಹರಿದಾಸ ಸಾಹಿತ್ಯ ಸಾರ. ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ–ಪು. 32,33,34,35–1987
3. ಲೇ.ಹೆಚ್.ಎಸ್.ಕೃಷ್ಣಮೂರ್ತಿ–ದಾಸಸಾಹಿತ್ಯ ದರ್ಶನ.ಮಂಗಳ ಭಾರತಿ ಪ್ರಕಾಶನ,ಮೈಸೂರು–ಪು.ಸಂ.32, 37,60–1987
4. ಲೇ. ಹೆಚ್.ಎಸ್.ವೆಂಕಟೇಶ ಮೂರ್ತಿ– ಕೀರ್ತನಕಾರರು–ಸಪ್ನ ಬುಕ್ ಹೌಸ್.ಬೆಂಗಳೂರು–ಪು.1,2,3–1975
5. ಸಂ.ಪ್ರೊ.ಸುಧಾಕರ–ಕನಕ ಸಾಹಿತ್ಯ ದರ್ಶನ ಸಂಪುಟ–4. ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು.ಪು.ಸಂ.25–1999
6. ಸಂ–ಟಿ.ಎನ್.ನಾಗರತ್ನ–ಸಮಗ್ರ ದಾಸ ಸಾಹಿತ್ಯ ಸಂ–2. ಶ್ರೀ ವಾದಿರಾಜರ ಕೀರ್ತನೆಗಳು –ಕನ್ನಡ ಮತ್ತು ಸಂಸ್ಕೃತಿ ಇಲಾಖೆ. ಬೆಂಗಳೂರು–ಪು.ಸಂ.240–2003
7. ಸಂ.ಟಿ.ಎನ್.ನಾಗರತ್ನ–ಸಮಗ್ರ ದಾಸ ಸಾಹಿತ್ಯ ಸಂ–2. ಶ್ರೀ ವಾದಿರಾಜರ ಕೀರ್ತನೆಗಳು, ಪುರಂದರದಾಸರ ಕೀರ್ತನೆಗಳು–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು–ಪು.ಸಂ.240–2003